

ಹಾಲ್‌ಸ್ಟಾಟ್ ಚೆಲುವಿಗೆ ಇನ್ನಷ್ಟು ಮೆರುಗು ತುಂಬುವ ವಿಶೇಷ ವಿನ್ಯಾಸದ ಮನೆಗಳು

ಅದು, ಈ ಸೌಂದರ್ಯದಾಚೆ ಬದುಕಿನ ಪರಿವೆಯೇ ಮರೆಯಾಗುವುದು ಖಚಿತ. ಇಲ್ಲಿನ ಸೌಂದರ್ಯವೇ ಪ್ರವಾಸಿಗರ ಬಹುದೊಡ್ಡ ಆಕರ್ಷಣೆಯಾದರೂ, ಹಾಲ್‌ಸ್ಟಾಟ್‌ನ ಹೆಗ್ಗಳಿಕೆ ಇಲ್ಲಿನ ಸಾಲ್ಟ್ ಮೈನ್ ಆಗಿದೆ. ಕಾರು ಪಾರ್ಕ್ ಮಾಡಿ ಮೊದಲು ಹೊರಟಿದ್ದೇ ಫ್ಯೂನಿಕ್ಯುಲಾರ್ ಗೊಂಡೋಲಾದಲ್ಲಿನ 'ಸಾಲ್ಟ್ ಮೌಂಟೇನ್' ವಿಹಾರಕ್ಕೆ. ಪರ್ವತದ ತುದಿಯಲ್ಲಿಳಿದು, ಸ್ಟೇಷನ್‌ನಿಂದ ಹೊರಬಂದರೆ ಇದೊಂದು ಗಂಧರ್ವಗಿರಿ. 'ಮಾತಿಲ್ಲಿ ಮೈಲಿಗೆಯು – ಹೊದ್ದು ನಿಲು ಮೌನವನು' ಎನ್ನುವ ದೈವಿಕ ಸೆಳೆತದಲ್ಲಿ ಮುಳುಗುವುದಷ್ಟೇ ನಮ್ಮ ಹಾಡಾಗಿತ್ತು.

ಕೆಳಗಿಳಿದು ಟೌನ್ ತಲಾಶಿಗೆ ಹೊರಟರೆ, ಕೇವಲ ಕಾಲ್ನಡಿಗೆಯಲ್ಲಿ 'ಆಲ್ಪೈನ್ ಕಲ್ಚರ್' ಕಾಣುವ ಅನುಭವ ರೋಚಕ. ಇರುವ ಒಂದೇ ರಸ್ತೆಯ ಒಂದೇ ಬದಿಯಲ್ಲಿದ್ದ ಕಟ್ಟಡಗಳ ವಿನ್ಯಾಸ ಒಂದೊಂದೂ ವಿಭಿನ್ನ. ಗೋಥಿಕ್ ಶೈಲಿ, ಆಸ್ಟ್ರಿಯಾದ ವಾಸ್ತುಶೈಲಿಯಲ್ಲಿ ನಿರ್ಮಿಸಿದ ಚಿಕ್ಕಚಿಕ್ಕ ಮನೆಗಳ ಗೋಡೆಯ ತುಂಬಾ ಹಬ್ಬಿಸಿದ ಸುಂದರ ಪೇರ್ ಹಣ್ಣಿನ ಮರಗಿಡಗಳು, ತುಂಬಿ ಸುರಿವ ಹೂಗಳು, ವಿಶಿಷ್ಟ ವಿನ್ಯಾಸದ ಸವೆನೀರ್ ಶಾಪ್‌ಗಳು, ಸರೋವರದ ಸೌಂದರ್ಯ ಸವಿಯುತ್ತಾ ನಡಿಗೆ ಬಹಳ ನಿಧಾನದಲ್ಲಿ ಸಾಗಿತ್ತು. ನಡೆದಷ್ಟೂ ಬಲ ಕಾಲಿಗೆ. ಮುಂದೆ ಸಿಕ್ಕಿದ್ದು 'ಮಾರ್ಕೆಟ್ ಸರ್ಕಲ್'. ಇಲ್ಲಿರುವ ಚೂಪು ಗೋಪುರದ ಪುರಾತನ ಗೋಥಿಕ್ ಚರ್ಚ್ ಮುಖ್ಯ ಆಕರ್ಷಣೆ. ಇದರ ಪಕ್ಕಕ್ಕೇ ಇದೆ 'ಬೋನ್ ಹೌಸ್' ಎನ್ನುವ 16ನೇ ಶತಮಾನದಲ್ಲಿ ಮರಣಿಸಿದವರ ಮೂಳೆ, ತಲೆಬುರುಡೆಗಳ ಸ್ಮಶಾನಮಂದಿರ.

ಸರೋವರದ ಹಿನ್ನೆಲೆಯಲ್ಲಿ ಈ ಚರ್ಚ್ ಇರುವ ಫೋಟೊ ಹಾಲ್‌ಸ್ಟಾಟ್ ಲೋಗೊ ಎನ್ನಬಹುದು, ಅಷ್ಟು ಮನೋಹರ. ಈ ಸರೋವರಕ್ಕೆ ಜೀವಜಲ ತುಂಬುವ ಸುತ್ತೂ ನಿಂತ ಪರ್ವತಗಳ ಅಂದ ಒಂದು ರೀತಿ ಸುಂದರ ಕುಟುಂಬ ಕಟ್ಟಿದ ಯಜಮಾನನ ಬೀಗುವಿಕೆಯಂತೆ ಗೋಚರವಾಗುತ್ತದೆ. ಹಿಮಗಾಲದಲ್ಲಿ ಹಿಡಿದಿಟ್ಟ ಹಿಮವನ್ನು ತಾಪದಲ್ಲಿ ಕರಗಿಸಿಕೊಂಡು ಯಥೇಚ್ಛ ಮಡಿಲಪಾತ್ರೆಗೆ ಸುರಿದು ಇಡೀ ತಾಣವನ್ನು ಇಷ್ಟು ಸರ್ವಾಂಗೀಣ ಸುಂದರವಾಗಿ ಮಾಡಿ ಹೀಗೆ ಪ್ರವಾಸಿಗರನ್ನು ಸೆಳೆಯುತ್ತಿದೆಯೆಂದರೆ ಇವು ಪ್ರಕೃತಿಯ ಶಕ್ತ ಯಜಮಾನನೇ ಹೌದು.

ಗಂಟೆಗಳು ಸರಿದಿದ್ದು ತಿಳಿಯುವುದಿಲ್ಲ. ಆದರೆ ಸರಿಯುತ್ತವೆ. ಬಂದವರು ಹಿಂದಿರುಗಲೇಬೇಕು, ಹೊರಟಾಯ್ತು ಸಂಕಟವನ್ನು ಎದೆಗೆ ತುಂಬಿಕೊಂಡು... ನಿಜಕ್ಕೂ ಇದು ಸ್ವರ್ಗಾತೀತ ಸೀಮೆ. ಆದರೆ, ಇದರ ಸೌಂದರ್ಯವೇ ಇದಕ್ಕೆ ಭಾರವಾಗುವಂತೆ ಪ್ರವಾಸಿಗರ ಬರುವಿಕೆ ದಿನ ದಿನ ಹೆಚ್ಚಳವಾಗುತ್ತಾ ಅಲ್ಲಿಯ ನಿವಾಸಿಗಳು, ಪರಿಸರವಾದಿಗಳು 'ನೋ ಎಂಟ್ರಿ', 'ಸ್ಟಾಪ್ ಟೂರಿಸಂ' ಎನ್ನುವಂಥ ಪ್ರತಿಭಟನೆಗಳನ್ನು ಆಗಾಗ ನಡೆಸುತ್ತಾ ಹಳ್ಳಿಗೆ ಬರುವ ಟನಲ್ ಮುಂದೆ ಪ್ರದರ್ಶನ ನಡೆಸುತ್ತಾ ಸರ್ಕಾರಕ್ಕೆ ಸವಾಲು ಹಾಕುತ್ತಿದ್ದಾರೆ.

ಜೀವಮಾನದಲ್ಲಿ ಒಮ್ಮೆಯಾದರೂ ಈ ಸೌಂದರ್ಯದ ಖನಿಯನ್ನು ನೋಡಿ ಬರಲೇಬೇಕೆನಿಸುವಷ್ಟು ಅಪ್ರತಿಮ ಸುಂದರಿ ಈ 'ಹಾಲ್‌ಸ್ಟಾಟ್'.

ಪ್ರತಿಕ್ರಿಯಿಸಿ: feedback@sudha.co.in




ಕ್ಯಾನ್ಸರ್ ಇದೆಯೇ? ಯಾವುದೇ ಹಂತದಲ್ಲಿರಲಿ ನರದ ತೊಂದರೆಯೇ?
ಡಯಾಬಿಟಿಸ್ ಇದೆಯೇ? ಕೂದಲು ಮತ್ತು ಚರ್ಮದ ಸಮಸ್ಯೆ ಇದೆಯೇ?
ಎಲ್ಲ ಸಮಸ್ಯೆಗಳಿಗೆ ಆಯುರ್ವೇದ ಚಿಕಿತ್ಸೆಗಾಗಿ ತಕ್ಷಣ ಸಂಪರ್ಕಿಸಿ.
ಕಪಿಲಾ ಆರೋಗ್ಯಧಾಮ
ತ್ಯಾವರೆಕೊಪ್ಪ, ಶಿವಮೊಗ್ಗ–577204.
ದೂ.ಸಂ: 07619553245, 08277196659, 09449079052
ಲೊಕೇಷನ್‌ಗಾಗಿ QR Code ಸ್ಕ್ಯಾನ್ ಮಾಡಿ
ಸಂದರ್ಶನ/ಸಮಾಲೋಚನೆ ಉಚಿತ
ಸ್ಥಳ: ಶಿವಮೊಗ್ಗ ಲಯನ್ ಸಫಾರಿ ಹತ್ತಿರ